ಸಾಕ್ಷಿಯನ್ನು ಇಂದು ದಿನಾಂಕ:22-11-2023 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪ್ರತಿವಾದಿ 3 ಎ ಮತ್ತು 3 ಡಿ ರವರ ಪರ ಪಾಟೀ ಸವಾಲು ಶ್ರೀ ಪಿ ಎಮ್ ಕೆ ವಕೀಲರಿಂದ**

1. ಮೃತ 3 ನೇ ಪ್ರತಿವಾದಿ ಮತ್ತು 1 ನೇ ಪ್ರತಿವಾದಿಯ ತಂದೆ ಚನ್ನಪ್ಪ ಅಣ್ಣ ತಮ್ಮಂದಿರು ಎಂದರೆ ನಿಜ. ನಮ್ಮದು ಆರ್ಥಿಕ ಸದೃಡ ಕುಟುಂಬ ಎಂದರೆ ಸರಿಯಲ್ಲ. ಬಡತನ ಕುಟುಂಬ ಎಂದು ಹೇಳುತ್ತಾರೆ. ನಮ್ಮ ತಂದೆಯ ಕಾಲದಲ್ಲಿ ನಮ್ಮ ಕುಟುಂಬಕ್ಕೆ 12 ಎಕರೆ ಜಮೀನು ಇತ್ತು. ನನ್ನ ತಾಯಿ ಮದುವೆಯಾದಾಗ 12 ಎಕರೆ ಜಮೀನು ಇತ್ತು. ನಮ್ಮ ಮನೆತನದ ಚೆನ್ನಾಗಿದೆ ಎಂಬ ಕಾರಣಕ್ಕಾಗಿ ನಮ್ಮ ತಾಯಿಯನ್ನು ಮದುವೆ ಮಾಡಿ ಕೊಟ್ಟಿರುತ್ತಾರೆ ಎಂದರೆ ನಿಜ. ನನ್ನ ತಾಯಿಯನ್ನು ಮದುವೆ ಮಾಡಿ ಕೊಟ್ಟ ನಂತರ ಇಲ್ಲಿಯವರೆಗೆ ಆಸ್ತಿಗೆ ಸಂಬಂಧಿಸಿದಂತೆ ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ. ತಕರಾರು ಮಾಡಿರುತ್ತಾರೆ.

2. ಆ ರೀತಿ ತಕರಾರು ನನ್ನ ತಾಯಿ 9 ವರ್ಷಗಳ ಹಿಂದೆ ಮಾಡಿರುತ್ತಾರೆ. ಮೊದಲು ಬಾಯಿ ಮಾತಿನ ಮೂಲಕ ಕೇಳಿದ್ದು ನಂತರ ಕೊಡದ ಕಾರಣ ನ್ಯಾಯಾಲಯಕ್ಕೆ ದಾವೆ ಸಲ್ಲಿಸಿರುತ್ತಾರೆ. ನನ್ನ ತಾಯಿಗೆ ಮೋಸ ಮಾಡಿ ನ್ಯಾಯಾಲಯದಲ್ಲಿ ಸಹಿ ಪಡೆದುಕೊಂಡು ಕಳುಹಿಸಿರುತ್ತಾರೆ ಎಂದು ಹೇಳುತ್ತಾರೆ. ಅಸಲು ದಾವಾ ನಂಬರ 35/2007 ಅಂತಾ ದಾವೆಯನ್ನು ನನ್ನ ತಾಯಿ ಮತ್ತು ಅವಳ ಸಹೋದರಿಯರು ದಾಖಲಿಸಿದ್ದರು ಎಂದರೆ ನಿಜ. ನನ್ನ ತಾಯಿಗೆ ಕೊಡಬೇಕಾದ ಪಾಲನ್ನು ಕೊಟ್ಟಿದ್ದರಿಂದ ಆ ದಾವೆ ವಜಾ ಮಾಡಲಾಗಿದೆ ಎಂದರೆ ಸರಿಯಲ್ಲ.

3. 1998 ರಿಂದ ಇಲ್ಲಿಯವರೆಗೆ ನನ್ನ ತಾಯಿಯಾಗಲಿ ಅಥವಾ ನಾನಾಗಲಿ ಯಾವುದೇ ಪಾಲು ಕೇಳಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಮತ್ತು ಆತನ ಸಹೋದರರ ಮಧ್ಯ ವಾಟ್ನಿ ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರವರ ಮಧ್ಯ ಆಗಿದ್ದು ಅದು ಮೋಸದಿಂದ ಕೂಡಿದೆ ಎಂದು ಹೇಳುತ್ತಾರೆ. ನನ್ನ ತಾಯಿ ಆ ರೀತಿ ಮೋಸದಿಂದ ಆಗಿರುವ ವಾಟ್ನಿಯನ್ನು ತಕರಾರು ಮಾಡಿರುತ್ತಾರೆ. ನನ್ನ ತಾಯಿಗೆ ಮೃತ ಕಲ್ಲಪ್ಪ ಮತ್ತು ಆತನ ಸಹೋದರರ ಮಧ್ಯ ಹಾಗೂ ಅವರ ಹಿರಿಯರ ಮಧ್ಯ ಆದ ವಾಟ್ನಿಯ ಬಗ್ಗೆ ಮಾಹಿತಿ ಇದ್ದರು ಕೂಡಾ ಸುಮ್ಮನೆ ಇದ್ದರು ಎಂದರೆ ಸರಿಯಲ್ಲ.

4. ನನ್ನ ತಾಯಿಗೆ ಹಿರಿಯರಿಂದ ಬಂದ ಜಮೀನುಗಳು ಮತ್ತು ಮನೆಗಳು ಕೂಡಾ ಇವೆ ಎಂದರೆ ನಿಜ. ಹಿರಿಯರಿಂದ ಬಂದಂತಹ ಮನೆಗಳನ್ನು ಈ ದಾವೆಯಲ್ಲಿ ವ್ಯಾಜ್ಯ ವಸ್ತು ಎಂದು ತೋರಿಸಿಲ್ಲ ಎಂದರೆ ನಿಜ. ಮೃತ 3 ನೇ ಪ್ರತಿವಾದಿಗೆ ಸರ್ವೇ ನಂಬರ 68/3 ಸಿ ಮತ್ತು 69/3 ಸಿ ಜಮೀನು ಪಾಲಿಗೆ ಹೋಗಿದೆ ಎಂದರೆ ನಿಜ. ಸದರಿ 8 ನೇ ಪ್ರತಿವಾದಿ 2013 ರಲ್ಲಿ ತನ್ನ ಪಾಲಿಗೆ ಬಂದ ಆಸ್ತಿಯನ್ನು ಮಾರಾಟಕ್ಕೆ ತೆಗೆದಿದ್ದ ಎಂದರೆ ಸರಿಯಲ್ಲ. ಆ ವಿಷಯ ನನಗೆ ಮತ್ತು ನನ್ನ ತಾಯಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಅದೇ ರೀತಿ ದಿನಾಂಕ 15-04-2013 ರಂದು ಸರ್ವೇ ನಂಬರ 69/5 ನೇದ್ದನ್ನು 8 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ವಿಷಯ ನನಗೆ ಮತ್ತು ನನ್ನ ತಾಯಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಆ ವಿಷಯ ಗೊತ್ತಿದ್ದರು ಕೂಡಾ ನನ್ನ ತಾಯಿ ಸುಮ್ಮನೆ ಇರುವ ಕಾರಣ ಅವಳ ಪಾಲಿಗೆ ಬರುವ ಹಣ ಕೊಟ್ಟಿದ್ದರು ಅದಕ್ಕೆ ಸುಮ್ಮನಿದ್ದಳು ಎಂದರೆ ಸರಿಯಲ್ಲ.

5. ನನ್ನ ತಾಯಿ ತನ್ನ ಪಾಲಿಗೆ ಬರತಕ್ಕಂತಹ ಕ್ಷೇತ್ರದ ಬದಲಾಗಿ ಹಣವನ್ನು ಪಡೆದುಕೊಂಡು ತನ್ನ ಹಕ್ಕನ್ನು ಅವಳ ಸಹೋದರರಿಗೆ ಬಿಟ್ಟು ಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ. ನನಗೆ 8 ನೇ ಪ್ರತಿವಾದಿ ಗೊತ್ತಿಲ್ಲ ಮತ್ತು ಆತನ ಊರು ವಿಳಾಸ ಗೊತ್ತಿಲ್ಲ. ಸದರಿ ಮಾರಾಟ ಮಾಡಿದ ವಿಷಯ ನನಗೆ ಮತ್ತು ತಾಯಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಆ ವಿಷಯ ಗೊತ್ತಿದ್ದರು ಸಹ ಪ್ರತಿವಾದಿ 3 ಮತ್ತು ಆತನ ವಾರಸುದಾರರಿಗೆ ತೊಂದರೆ ಕೊಡುವ ಉದ್ದೇಶಕ್ಕಾಗಿ ಈ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ವಿಷಯಕ್ಕೆ ನಾನು ಮಾಹಿತಿ ನೀಡಿರುತ್ತೇನೆ. ಸುಳ್ಳು ಮಾಹಿತಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ